SL. No. : OP

ಒಟ್ಟು ಪ್ರಶ್ನೆಗಳ ಸಂಖ್ಯೆ : 25 + 25 ]

# CCE RR

[ ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 8

Total No. of Questions : 25 + 25 ]

[ Total No. of Printed Pages : 8

**ಸಂಕೇತ ಸಂಖ್ಯೆ : 98-K**

**Code No. : 98-K**

## ವಿಷಯ : ಕರ್ನಾಟಕ ಸಂಗೀತ / ಹಿಂದೂಸ್ಥಾನಿ ಸಂಗೀತ — ಶಾಸ್ತ್ರ ವಿಭಾಗ

## Subject : CARNATIC MUSIC / HINDUSTANI MUSIC — THEORY

**( ಹೊಸ ಪಠ್ಯಕ್ರಮ / New Syllabus )**

**( ಪುನರಾವರ್ತಿತ ಶಾಲಾ ಅಭ್ಯರ್ಥಿ / Regular Repeater )**

**( ಕನ್ನಡ ಭಾಷಾಂತರ / Kannada Version )**

**( ಕರ್ನಾಟಕ ಸಂಗೀತ ಅಥವಾ ಹಿಂದೂಸ್ಥಾನಿಗಳಲ್ಲಿ ಯಾವುದಾದರೂ ಒಂದನ್ನು ಆಯ್ಕೆ ಮಾಡಿಕೊಳ್ಳುವುದು )**

ದಿನಾಂಕ : 21. 06. 2017 ]

[ Date : 21. 06. 2017

ಸಮಯ : ಮಧ್ಯಾಹ್ನ 2-00 ರಿಂದ ಸಂಜೆ 5-15 ರವರೆಗೆ ]

[ Time : 2-00 P.M. to 5-15 P.M.

ಗರಿಷ್ಠ ಅಂಕಗಳು : 40 ]

[ Max. Marks : 40

***ಪರೀಕ್ಷಾರ್ಥಿಗಾಗಿ ಸಾಮಾನ್ಯ ಸೂಚನೆಗಳು :***

1. ಈ ಪ್ರಶ್ನೆಪತ್ರಿಕೆಯು 25 + 25 ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳನ್ನು ಹೊಂದಿದೆ.
2. ಈ ಪ್ರಶ್ನೆಪತ್ರಿಕೆಯನ್ನು ಹಿಮ್ಮುಖ ಜಾಕೆಟ್ ಮೂಲಕ ಮೊಹರು (ಸೀಲ್) ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ ನಿಮ್ಮ ಪ್ರಶ್ನೆಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತ್ತರಿಸಿ, ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.
3. ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.
4. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.
5. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ಕೊಡಲಾಗಿದೆ.

ಇಲ್ಲಿ ಕತ್ತರಿಸಿ

**TEAR HERE TO OPEN THE QUESTION PAPER**

**ಪ್ರಶ್ನೆಪತ್ರಿಕೆಯನ್ನು ತೆರೆಯಲು ಇಲ್ಲಿ ಕತ್ತರಿಸಿ**

**Tear here**

# (ಕರ್ನಾಟಕ ಸಂಗೀತ)

I. **ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ :** $8 \times 1 = 8$

1. 29ನೇ ಮೇಳಕರ್ತ ಈ ರಾಗವಾಗಿದೆ

   (A) ಮಾಯಾಮಾಳವಗೌಳ (B) ಧೀರ ಶಂಕರಾಭರಣ

   (C) ಕಲ್ಯಾಣಿ (D) ಖರಹರಪ್ರಿಯ

2. ಈ ರಾಗವು ಜನ್ಯ ರಾಗವಾಗಿದೆ

   (A) ಹಂಸಧ್ವನಿ (B) ಕಲ್ಯಾಣಿ

   (C) ಶಂಕರಾಭರಣ (D) ಮಾಯಾಮಾಳವಗೌಳ

3. ಒಂದು ಲಘುವನ್ನು ಮಾತ್ರ ಹೊಂದಿರುವ ತಾಳ

   (A) ಧ್ರುವ ತಾಳ (B) ಮಠ್ಯ ತಾಳ

   (C) ಅಟ ತಾಳ (D) ಏಕ ತಾಳ

4. ಈ ವಾದ್ಯವು ಗಾಳಿ ವಾದ್ಯವಾಗಿದೆ

   (A) ತಂಬೂರಿ (B) ಕೊಳಲು

   (C) ವೀಣೆ (D) ಮೃದಂಗ

5. ಅಭ್ಯಾಸಗಾನದ ರಚನೆ ಇದಾಗಿದೆ

   (A) ತಾನವರ್ಣ (B) ಅಲಂಕಾರ

   (C) ತಿಲ್ಲಾನ (D) ಕೃತಿ

6. ಪಿಳ್ಳಾರಿ ಗೀತೆಗಳು ಈ ರಾಗದಲ್ಲಿದೆ

(A) ಮಲಹರಿ (B) ಹಂಸಧ್ವನಿ

(C) ಮೋಹನ (D) ಮಾಯಾಮಾಳವಗೌಳ

7. ಕಮಾನಿನಿಂದ ನುಡಿಸುವ ವಾದ್ಯ ಇದಾಗಿದೆ

(A) ವೀಣೆ (B) ಪಿಟೀಲು

(C) ತಂಬೂರಿ (D) ಗೋಟುವಾದ್ಯ

8. ಮಧ್ಯಮ ಇಲ್ಲದ ರಾಗ ಇದಾಗಿದೆ

(A) ಹಿಂದೋಳ (B) ಮಲಹರಿ

(C) ವಸಂತ (D) ಮೋಹನ

II. **ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ *ಒಂದೊಂದು* ವಾಕ್ಯದಲ್ಲಿ ಉತ್ತರಿಸಿ :** $8 \times 1 = 8$

9. ಪುರಂದರದಾಸರ ಅಂಕಿತವನ್ನು ತಿಳಿಸಿ.

10. ಸ್ವರಗಳಲ್ಲಿ ಎಷ್ಟು ವಿಧ ?

11. ಔಢವ ರಾಗ ಎಂದರೇನು ?

12. ಅನುದ್ರುತದ ಚಿಹ್ನೆಯನ್ನು ಬರೆಯಿರಿ.

13. ಪ್ರಕೃತಿ ಸ್ವರಗಳನ್ನು ಹೆಸರಿಸಿ.

14. ಲಘುವಿನಲ್ಲಿ ಎಷ್ಟು ಜಾತಿಗಳಿವೆ ?

15. ಯಾವುದಾದರೂ ಒಂದು ಭಾಷಾಂಗ ರಾಗವನ್ನು ಹೆಸರಿಸಿ.

16. ಒಂದು ದ್ರುತದಲ್ಲಿ ಬರುವ ಅಕ್ಷರಗಳನ್ನು ತಿಳಿಸಿ.

III. **ಈ ಕೆಳಗಿನ ಪ್ರಶ್ನೆಗಳಿಗೆ ಎರಡರಿಂದ ಮೂರು ವಾಕ್ಯಗಳಲ್ಲಿ ಉತ್ತರಿಸಿ :** 7 × 2 = 14

17. ಮಂದ್ರಸ್ಥಾಯಿ ವರಸೆ ಮತ್ತು ತಾರಸ್ಥಾಯಿ ವರಸೆಗಳ ನಡುವಿನ ವ್ಯತ್ಯಾಸವೇನು ?

18. ಲಘು ಮತ್ತು ಅನುದ್ರುತ ಇವುಗಳ ಪರಸ್ಪರ ವ್ಯತ್ಯಾಸವನ್ನು ತಿಳಿಸಿ.

19. ವಿಕೃತಿ ಸ್ವರಗಳನ್ನು ಹೆಸರಿಸಿ.

20. ಕಲ್ಯಾಣಿ ರಾಗದ ಲಕ್ಷಣವನ್ನು ಬರೆಯಿರಿ.

21. ಸಂಚಾರಿಗೀತೆ ಮತ್ತು ಲಕ್ಷಣಗೀತೆಗಳ ನಡುವಿನ ವ್ಯತ್ಯಾಸವೇನು ?

22. ಜನಕ ರಾಗ ಎಂದರೇನು ?

23. ಮೋಹನ ಹಾಗೂ ಹಂಸಧ್ವನಿಗಿರುವ ಪರಸ್ಪರ ವ್ಯತ್ಯಾಸವನ್ನು ತಿಳಿಸಿ.

IV. **ಈ ಕೆಳಗಿನ ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ :** 2 × 5 = 10

24. ಕರ್ನಾಟಕ ಸಂಗೀತದ ವಾದ್ಯಗಳ ವರ್ಗೀಕರಣವನ್ನು ಬರೆಯಿರಿ.

25. ಸಪ್ತತಾಳಗಳ ಹೆಸರು, ಅಂಗಗಳು ಮತ್ತು ಅಕ್ಷರಗಳನ್ನು ತಿಳಿಸಿ.

# (ಹಿಂದೂಸ್ಥಾನಿ ಸಂಗೀತ)

I. **ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ :** $8 \times 1 = 8$

1. ಪ್ರಕೃತಿ ಸ್ವರಗಳು

   (A) ರೆ, ಗ (B) ಗ, ಮ

   (C) ಧ, ನಿ (D) ಸ, ಪ

2. ಭೂಪ್ ರಾಗದ ಥಾಟ್

   (A) ಕಲ್ಯಾಣ (B) ಖಮಾಜ್

   (C) ಕಾಫಿ (D) ಬಿಲಾವಲ

3. ತ್ರಿತಾಳದ ಒಟ್ಟು ಮಾತ್ರಾಗಳು

   (A) ಹತ್ತು (B) ಹದಿನಾರು

   (C) ಹನ್ನೆರಡು (D) ಆರು

4. ದುರ್ಗಾ ರಾಗದ ಜಾತಿ

   (A) ಔಢವ (B) ಷಾಢವ

   (C) ಸಂಪೂರ್ಣ (D) ಷಾಢವ–ಸಂಪೂರ್ಣ

5. ಗಾಯಕರು ಶೃತಿಗಾಗಿ ಉಪಯೋಗಿಸುವ ವಾದ್ಯ

   (A) ತಂಬೂರಿ (B) ವೀಣೆ

   (C) ಸಿತಾರ್ (D) ಸಾರಂಗಿ

6. ತಬಲಾ–ಡಗ್ಗಾ ಇದು

(A) ಘನ ವಾದ್ಯ (B) ತತ್ ವಾದ್ಯ

(C) ಸುಷಿರ ವಾದ್ಯ (D) ಅವನದ್ಧ ವಾದ್ಯ

7. ಕರ್ನಾಟಕ ಸಂಗೀತದ ಪಿತಾಮಹ

(A) ಶ್ರೀ ಪುರಂದರದಾಸರು (B) ಕನಕದಾಸರು

(C) ವಿಜಯದಾಸರು (D) ಜಗನ್ನಾಥದಾಸರು

8. ಧಾ, ಧೀಂ, ನಾ। ಧಾ, ತೀಂ, ನಾ ಇದು

(A) ಕಹರವಾ ತಾಳದ ಬೋಲ್ (B) ಝುಪ್ತಾಲದ ಬೋಲ್

(C) ಏಕತಾಳದ ಬೋಲ್ (D) ದಾದರಾ ತಾಳದ ಬೋಲ್

II. **ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ *ಒಂದೊಂದು* ವಾಕ್ಯದಲ್ಲಿ ಉತ್ತರಿಸಿ :** $8 \times 1 = 8$

9. 'ಸಂಗೀತ' ಎಂದರೇನು ?

10. 'ಸ್ವರ' ಎಂದರೇನು ?

11. 'ನಾದ' ಎಂದರೇನು ?

12. 'ವಿಕೃತಿ ಸ್ವರ' ಎಂದರೇನು ?

13. 'ಅಚಲ ಸ್ವರ' ಎಂದರೇನು ?

14. 'ಸಂವಾದಿ ಸ್ವರ' ಎಂದರೇನು ?

15. ಒಟ್ಟು ರಸಗಳು ಎಷ್ಟು ?

16. 'ಮ' ಇದು ಯಾವ ಸ್ವರವಾಗಿದೆ ?

III. **ಈ ಕೆಳಗಿನ ಪ್ರಶ್ನೆಗಳಿಗೆ *ಎರಡರಿಂದ ಮೂರು* ವಾಕ್ಯಗಳಲ್ಲಿ ಉತ್ತರಿಸಿ :** 7 × 2 = 14

17. ಭೀಮಪಲಾಸ್ ರಾಗದ ಆರೋಹಣ–ಅವರೋಹಣವನ್ನು ಚಿಹ್ನೆ ಸಹಿತ ಬರೆಯಿರಿ.

18. 'ವಿಕೃತಿ ಸ್ವರ' ಎಂದರೇನು ? ಎಷ್ಟು ಪ್ರಕಾರಗಳು ? ಹೆಸರಿಸಿ.

19. 'ವಾದ್ಯ' ಎಂದರೇನು ? ಎಷ್ಟು ಭಾಗಗಳಾಗಿ ವಿಂಗಡಿಸಲಾಗಿದೆ ?

20. ಏಕತಾಳದ ಬೋಲ್‌ನ್ನು ಚಿಹ್ನೆ ಸಹಿತ ಬರೆಯಿರಿ.

21. ಪ್ರಾರಂಭಿಕ ಸ್ವರಾಭ್ಯಾಸದ ಆರೋಹಣ–ಅವರೋಹಣ ಬರಿಯಿರಿ.

22. ಅಲಂಕಾರ ಸ್ವರದ ಆರೋಹಣ–ಅವರೋಹಣ ಬರೆಯಿರಿ.

23. ಜಂಟಿ ಸ್ವರದ ಆರೋಹಣ–ಅವರೋಹಣ ಬರೆಯಿರಿ.

IV. **ಈ ಕೆಳಗಿನ ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ :** 2 × 5 = 10

24. ತ್ರಿತಾಳದ ಶಾಸ್ತ್ರ ಪರಿಚಯ ಬರೆದು, ಚಿಹ್ನೆ, ಮಾತ್ರಾ, ಬೋಲ್ ಭಾಗಗಳೊಂದಿಗೆ, ವಿಸ್ತಾರವಾಗಿ ಬರೆಯಿರಿ.

25. ನೀವು ಕಲಿತಿರುವ ಯಾವುದಾದರೂ ಒಂದು ರಾಗದ ಸ್ವರಗೀತೆಯನ್ನು ಸ್ವರಲಿಪಿ ಪದ್ಧತಿಯಲ್ಲಿ ಬರೆಯಿರಿ.